## ಕೆಡುಕಿನ ಬಾಲಕ್ಕೆ ಕೊನೆಯಿಲ್ಲವೆ?

ಈಚೆಗೆ ಬಹುತೇಕ ಧಾರಾವಾಹಿಗಳು ಸಾವಿರಾರು ಕಂತುಗಳಲ್ಲಿ ಬರುತ್ತಿವೆ. ಅದಕ್ಕಾಗಿ ಕಥೆಯನ್ನು ಎಳೆದಾಡುತ್ತಾ ಅಸಂಬದ್ಧವಾಗಿ ತೋರಿಸುತ್ತಿದ್ದಾರೆ. ಕಥೆಯನ್ನು ಎಳೆಯಬೇಕೆಂದು ಖಳನಾಯಕ/ಖಳನಾಯಕಿಯರ ಕುತಂತ್ರಗಳನ್ನೇ ಮೆರೆಸಿ ನಾಯಕ/ನಾಯಕಿಯರನ್ನು ಮೂರ್ಖರಂತೆ ತೋರಿಸಲಾಗುತ್ತಿದೆ.

ಒಳಿತು ಕೆಡುಕುಗಳ ಸಂಘರ್ಷದ ಕೊನೆಗೆ ಒಳ್ಳೆಯದಕ್ಕೆ ಜಯವಾಗಬೇಕು. ಆದರೆ ಒಂದು ಸಾವಿರ ಕಂತುಗಳಲ್ಲಿ 999 ಕಂತುಗಳಲ್ಲಿ ಕೆಟ್ಟದ್ದು ಮೆರೆದು ಕಡೆಯ ಒಂದು ಕಂತಿನಲ್ಲಿ ಒಳ್ಳೆಯದಕ್ಕೆ ಜಯವಾದರೆ ಅದು ಅರ್ಥಹೀನ. ಕಂತುಗಳಿಗೆ ಮಿತಿಯನ್ನು ನಿಗದಿಪಡಿಸಿದರೆ ಉತ್ತಮ ಧಾರಾವಾಹಿ ನಿರೀಕ್ಷಿಸಬಹುದೇನೋ.

—ಗಾಯತ್ರಿ ದೇವಿ ಎ.ಹೆಚ್.

## ನಗುವಿಗೆ ಬೇಡ ದ್ವಂದ್ವಾರ್ಥ

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ಚೆನ್ನಾಗಿ ಮೂಡಿಬರುತ್ತಿದೆ. ತೀರ್ಪುಗಾರರು ನೀಡುವ ಉತ್ತೇಜನದ ಮಾತುಗಳಿಂದ ಸ್ಪರ್ಧಿಗಳಲ್ಲಿ ವಿಶ್ವಾಸ ಮೂಡುತ್ತದೆ. ಈ ವೇದಿಕೆ ಕೆಲವು ವರ್ಷಗಳಿಂದ ಕಲಾವಿದರನ್ನು ಹುಟ್ಟುಹಾಕುತ್ತಿದೆ. ಪ್ರತಿ ಸಂಚಿಕೆಯಲ್ಲೂ ಜೀವನಮೌಲ್ಯ ಹೂರಣದ ರೂಪಕಗಳನ್ನು ಪ್ರದರ್ಶಿಸುತ್ತಾರೆ. ತೀರ್ಪುಗಾರರು ಅದರ ಸರಿ–ತಪ್ಪುಗಳನ್ನು ನಯವಾಗಿ ತಿದ್ದಿ ಮನನ ಮಾಡಿಸುತ್ತಾರೆ. ಆದರೆ ಸ್ಪರ್ಧಿಗಳ ಕಿರುಚಾಟ, ಹೊಡೆದಾಟ ಮತ್ತು ದ್ವಂದ್ವಾರ್ಥ ಸಂಭಾಷಣೆ ಬೇಸರ ತರುತ್ತದೆ.

—ಎಂ.ಎಸ್. ಉಷಾ ಪ್ರಕಾಶ್

## ಗ್ರಹಣವೋ ಗ್ರಹಚಾರವೋ...

ದೀಪಾವಳಿಯ ಮುನ್ನಾದಿನ ಸಂಭವಿಸಿದ ಗ್ರಹಣದ ವಿಷಯ ಬಹುತೇಕರಿಗೆ ತಿಳಿದ ವಿಚಾರ. ಟೀವಿಯಲ್ಲಿ ಮಾತ್ರ ಗ್ರಹಣದ ಬಗ್ಗೆ ಕಪೋಲಕಲ್ಪಿತ ರಾಶಿ, ಗ್ರಹಚಾರ ಫಲವನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿದ್ದರು. ಇದೇನೂ ಹೊಸತಲ್ಲ. ಈ ಗ್ರಹಣಗಳು ಬಂದಾಗ ನಮ್ಮ ಜ್ಯೋತಿಷಿಗಳು ಟೀವಿಯಲ್ಲಿ ಬಂದು – 'ವಿಶ್ವ ವಿನಾಶಕ್ಕೆ ನಾಂದಿ', 'ಭೀಕರ ಪ್ರಳಯ' ಅಡಿ ಬರಹದಲ್ಲಿ ಭೀತಿಯನ್ನು ಪ್ರಸಾರ ಮಾಡುತ್ತಾರೆ. ತ್ರಿಲೋಕ ಜ್ಞಾನಿಗಳ ಸ್ವರೂಪದ ಜ್ಯೋತಿಷಿಗಳು, 'ಕೆಲವು ರಾಶಿ/ನಕ್ಷತ್ರದಲ್ಲಿ ಜನಿಸಿದವರು ಹೇಗೆ ಗ್ರಹಣದ ದೋಷದ ಪರಿಹಾರ ಮಾಡಿಕೊಳ್ಳಬೇಕು ಎಂದು ಸಾವಿರಾರು ರೂಪಾಯಿ ಖರ್ಚಿನ ಮಾರ್ಗವನ್ನು ಸೂಚಿಸಿದರು. ಈ ರೀತಿ ಅವರು ಆದೇಶಿಸುವುದು ಮೂರ್ಖತನ ಎನ್ನಬೇಕೇ? ವೀಕ್ಷಕರ ಗ್ರಹಚಾರ ಎನ್ನಬೇಕೆ?

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಕ್ವಿಜ್ ಮಾಸ್ಟರ್ ತೂಕಡಿಕೆ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಸಂಚಿಕೆಯೊಂದರಲ್ಲಿ ಪ್ರಶ್ನೆ ಹೀಗಿತ್ತು: '1978ನೇ ಇಸವಿಯಲ್ಲಿ ಕರ್ನಾಟಕ ಕ್ರೀಡೆಗೆ ಸಂಬಂಧಪಟ್ಟ ಹಾಗೆ ನಡೆದ ಮಹತ್ವದ ಘಟನೆ ಯಾವುದು?'

ಯಾವ ಸ್ಪರ್ಧಿಯೂ ಉತ್ತರ ನೀಡಲಿಲ್ಲ. ಅನಿವಾರ್ಯವಾಗಿ ಕ್ವಿಜ್ ಮಾಸ್ಟರ್ 'ಕರ್ನಾಟಕ ಕ್ರಿಕೆಟ್ ತಂಡ ಮೊದಲ ಬಾರಿಗೆ ರಣಜಿ ಟ್ರೋಫಿ ಪ್ರಶಸ್ತಿಯನ್ನು ಗೆದ್ದುಕೊಂಡಿತು' ಎಂದು ಉತ್ತರ ನೀಡಿದರು.

ವಾಸ್ತವವಾಗಿ ಅದು ತಪ್ಪು ಉತ್ತರ. 1973–74ನೇ ಸಾಲಿನಲ್ಲೇ ಕರ್ನಾಟಕ ಜೈಪುರದಲ್ಲಿ ನಡೆದ ಅಂತಿಮ ಹಣಾಹಣಿಯಲ್ಲಿ ರಾಜಸ್ಥಾನ ತಂಡವನ್ನು ಮಣಿಸಿ ಪ್ರಥಮ ಬಾರಿಗೆ ರಣಜಿ ಟ್ರೋಫಿ ಕಿರೀಟವನ್ನು ಮುಡಿಗೇರಿಸಿಕೊಂಡಿತು. ಆಗ ಎ.ಇ.ಎಸ್. ಪ್ರಸನ್ನ ನಾಯಕರಾಗಿದ್ದರು. ಅದೇ ವರ್ಷ 'ಮೈಸೂರು' ಎಂಬ ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂದು ಮರು ನಾಮಕರಣ ಮಾಡಲಾಯಿತು.

—ಹೆಚ್.ವಿ. ಶ್ರೀಧರ್, ಬೆಂಗಳೂರು



## ಬಿಗ್ ಬಾಸ್ ಆಗಲಿ ಬೌದ್ಧಿಕ ಕಣ

ಕಲರ್ಸ್ ಕನ್ನಡದ 'ಬಿಗ್ ಬಾಸ್'ನಲ್ಲಿ ಸದಾ ಕಚ್ಚಾಟ. ಆದರೆ, ಇತ್ತೀಚೆಗೆ ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಟಾಸ್ಕ್ ನಡೆಯಿತು. ಅದರಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಬೇಕಿತ್ತು. ಕ್ಯಾಪ್ಟನ್ ದೀಪಿಕಾ ದಾಸ್ ಈ ಸ್ಪರ್ಧೆಯನ್ನು ನಿರ್ವಹಿಸಿ ತೀರ್ಪು ನೀಡಬೇಕಿತ್ತು. ಆದರೆ ತಪ್ಪು ಪ್ರಶ್ನೆಗಳನ್ನು ಗುರುತಿಸುವಲ್ಲಿ ಅವರು ಎಡವಿದ್ದರು.

ಪ್ರಶಾಂತ್ ಸಂಬರಗಿ ಬಣದವರು 'ಬೆಳಗಾವಿ, ಬೆಂಗಳೂರು, ರಾಯಚೂರು, ಬಾಗಲಕೋಟೆ, ಮಂಗಳೂರು' ಎಂಬ ಪ್ರಶ್ನೆಯನ್ನು ಇಟ್ಟರು. ದಿವ್ಯಾ ಉರುಡುಗ ಬಣದ ಸದಸ್ಯರು 'ಬೆಂಗಳೂರು' ಗುಂಪಿಗೆ ಸೇರದ ಪದವೆಂದು ಉತ್ತರಿಸಿದರು. ಅದು ರಾಜಧಾನಿಯಾಗಿರುವುದರಿಂದ ಗುಂಪಿಗೆ ಸೇರದ್ದೆಂಬುದು ಅವರ ಸ್ಪಷ್ಟೀಕರಣ. ಆದರೆ ಅದು ವಿರುದ್ಧ ಬಣದವರ ಪ್ರಕಾರ ತಪ್ಪಾಗಿದ್ದು – ಗಡಿನಾಡು ಆಗಿರದ 'ಬಾಗಲಕೋಟೆ'ಸರಿ ಉತ್ತರವಾಗಿತ್ತು. ಮಂಗಳೂರು ಕರಾವಳಿ ಆಗಿದ್ದರಿಂದ ಅದೂ ಸರಿ ಆಗುವಂತೆ ಇತ್ತು. ಉತ್ತರ ಸರಿಯೆಂದು ಅವರ ಬಣಕ್ಕೆ ಅಂಕ ನೀಡಬೇಕಿತ್ತು. ಆದರೆ ಕ್ಯಾಪ್ಟನ್ ಹಾಗೆ ಮಾಡದೆ ಗೊಂದಲವನ್ನು ಸೃಷ್ಟಿ ಮಾಡಿದರು.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಪೊಲೀಸ್, ಬಫೂನ್ ಅಲ್ಲ!

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಹರ್ಷನನ್ನು ಏಕಾಏಕಿ ಪೊಲೀಸ್ ಸ್ಟೇಷನ್‌ಗೆ ಕರೆಸಿ ಕೈಕೋಳ ತೊಡಿಸಿ ಲಾಕಪ್‌ಗೆ ತಳ್ಳುತ್ತಾರೆ. ಇದೆಲ್ಲವೂ ದೂರು ನೀಡಿದ ಸಾನಿಯಾ ನಿರ್ದೇಶನದ ಮೇರೆಗೆ ಆಗುತ್ತದೆ. ಪೊಲೀಸ್ ಅಧಿಕಾರಿಗಳಿಗೆ ಹೀಗೆ ಮಾಡಿ ಎಂದು ಹೇಳಲು ಯಾರಿಗೂ ಅವಕಾಶ ಇಲ್ಲ. ಬಂಧನಕ್ಕೊಳಗಾದ ವ್ಯಕ್ತಿಗೆ ಮನಬಂದಂತೆ ಕೈಕೋಳ ತೊಡಿಸಲು ಅವಕಾಶವಿಲ್ಲ. ವಿಚಾರಣಾಧೀನ ಕೈದಿ ಕಸ್ಟಡಿಯಿಂದ ತಪ್ಪಿಸಿಕೊಳ್ಳುವ ಅಥವಾ ತನಗೆ ತಾನೇ ಹಾನಿ ಮಾಡಿಕೊಳ್ಳುವ ಅಥವಾ ಇತರರಿಗೆ ತೊಂದರೆ ಕೊಡುವ ಸಾಧ್ಯತೆಯಿದ್ದರೆ ಮಾತ್ರ ಅಂತಹವರಿಗೆ ಕೈಕೋಳವನ್ನು ಹಾಕಬಹುದು. ಹೀಗೆಂದು ನ್ಯಾಯಾಲಯಗಳ ಹಲವಾರು ತೀರ್ಮಾನಗಳಿವೆ. ಹೀಗಿರುವಾಗ ಧಾರಾವಾಹಿಗಳಲ್ಲಿ ಈ ರೀತಿಯ ದೃಶ್ಯಗಳನ್ನು ತೋರಿಸುವಾಗ ಇದೆಲ್ಲಾ ಅರಿವಿರಬೇಕಲ್ಲವೇ?

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ವೀಕ್ಷಕರೇ ವಿದೂಷಕರು

ಝೀ ಕನ್ನಡದಲ್ಲಿ 'ಕುಟುಂಬ ಅವಾರ್ಡ್ಸ್' ನಾಮ ನಿರ್ದೇಶನದ ಕಾರ್ಯಕ್ರಮ ಸತ್ಯದ ಅನಾವರಣಕ್ಕೆ ಸಾಕ್ಷಿಯಾಯಿತು. 'ಬೆಸ್ಟ್ ಕಾಮಿಡಿಯನ್ಸ್' ವಿಭಾಗದಲ್ಲಿ ನಾವು ಖಳನಾಯಕ/ನಾಯಕಿ ಅಂದುಕೊಂಡಿದ್ದ ಬಾಲ, ದಾಮಿನಿ, ಕೀರ್ತನಾ, ದಿವ್ಯಾ ಅವರಿಗೆ ಪ್ರಶಸ್ತಿ ನೀಡಿದರು. ಅತ್ತ ಹಾಸ್ಯಗಾರನೂ ಅಲ್ಲದ ಕೇಡಿಯೂ ಅಲ್ಲದ ದಾಮಿನಿ ಗಂಡ ಮೋಹನ್ ಈ ವಿಭಾಗದಲ್ಲಿ ಕಾಣಿಸಿದಾಗ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. 'ಪುಟ್ಟಕ್ಕನ ಮಕ್ಕಳ' ನಾಯಕನ ಸಹಾಯಕರಾದ ನಾಗ ಮುಂಗುಸಿ ಹಾಗೂ ಹುಲಿರಾಯ ಅವರನ್ನೂ ವಿದೂಷಕರೆಂದು ಹೇಳಲಾಯಿತು. ನಮ್ಮ ಪುಣ್ಯಕ್ಕೆ ನಾಯಕ ನಾಯಕಿಯರನ್ನು ವಿದೂಷಕರೆಂದು ಗುರುತಿಸಲಿಲ್ಲ. 'ಮನರಂಜನೆ ಮಾತ್ರ ಕಾರ್ಯಕ್ರಮದ ಉದ್ದೇಶ' ಎಂಬ ಘೋಷವಾಕ್ಯದೊಂದಿಗೆ ಪ್ರಸಾರವಾಗುವ ಎಲ್ಲ ಧಾರಾವಾಹಿಗಳು ಹೇಳುವ ಸತ್ಯವೇನೆಂದರೆ ಅವರ ಪಾಲಿಗೆ ವೀಕ್ಷಕರೇ ವಿದೂಷಕರಿದ್ದಂತೆ.

—ವಾ. ಮುರಳೀಧರ,ತೀರ್ಥಹಳ್ಳಿ